ಗಳ ಕಂದಾಯವನ್ನು ಮನ್ನಾ ಮಾಡಿದ್ದೇವೆ. ಇನ್ನೂ ಅವಶ್ಯ ಇದ್ದರೆ ಮನಃ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸಹಕಾರಿ ಕ್ಷೇತ್ರದ ನೌಕರರ ಬಗ್ಗೆ

೧೩೨೯. ಶ್ರೀ ಯು. ಭೂಪತಿ (ಸಂಡೂರು) ಮತ್ತು ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಸದರಿ ವಿಷಯದ ಬಗ್ಗೆ ಸಹಕಾರಿ ಬ್ಯಾಂಕುಗಳ ನೌಕರರ ಸಂಘಗಳಿಂದ ಸರ್ಕಾರಕ್ಕೆ ಮನವಿ ಗಳೇನಾದರೂ ಬಂದಿದೆಯೇ?

ಇ) ಖಾಸಗಿ ಸಹಕಾರಿ ಬ್ಯಾಂಕುಗಳ ನೌಕರರೆಲ್ಲರಿಗೂ ಸಮಾನ ವೇತನ ಹಾಗೂ ಸೇವಾ ಸೌಲಭ್ಯ ಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಈ) ಹಾಗಿದ್ದಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಮುಚ್ಚುವ ಸ್ಥಿತಿಗೆ ಬಂದಿರುವ ಖಾಸಗಿ ಸಹಕಾರಿ ಬ್ಯಾಂಕುಗಳ ನೌಕರರಿಗೆ ಪರಿಹಾರವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ವಿಶ್ವಾನಾಥಯ್ಯ (ಸಹಕಾರ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಸಹಕಾರ ಬ್ಯಾಂಕುಗಳ ನೌಕರರ ವೇತನ ಹಾಗೂ ಸೇವಾ ಸೌಲಭ್ಯಗಳನ್ನು ಆಯಾ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸಹಕಾರ ಸಂಘಗಳ ನಿಯಮಗಳು ೧೯೬೦ರ ನಿಯಮ ೧೭ ಮತ್ತು ೧೮ರಂತೆ ಒದಗಿಸುವ ಬಗ್ಗೆ ನಿಬಂಧಕರು ಕ್ರಮ ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

ಈ) ಇಂತಹ ಪ್ರಕರಣಗಳು ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಗಮನಕ್ಕೆ ತಂದರೆ ಕಾನೂನು ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳಲು ಪರಿಶೀಲಿಸುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರುಗಳನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಿದ್ದರೆ, ಇಲ್ಲ ಎಂದು ಹೇಳಿದ್ದಾರೆ. ಸರ್ಕಾರಿ ನೌಕರರಿಗೆ ಯಾವ ರೀತಿ ಕಾನೂನು, ನಿಬಂಧನೆಗಳು ಇವೆಯೋ ಅದೇ ಕಾನೂನು ನಿಬಂಧನೆಗಳು ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರುಗಳಿಗೂ ಅನ್ವಯವಾದ ಹಾಗೆ ಅವರುಗಳನ್ನು ಸರ್ಕಾರಿ ನೌಕರರಾಗಿ ಪರಿಗಣಿಸದಿದ್ದರೆ ಅವರಿಗೆ ಅನ್ಯಾಯವಾಗುವುದಿಲ್ಲವೆ?

ಶ್ರೀ ಹೆಚ್. ವಿಶ್ವಾನಾಥಯ್ಯ.— ಮಾನ್ಯ ಅಧ್ಯಕ್ಷರೇ, ಸಹಕಾರಿ ಸಂಘ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿ ಕೆಲಸ ಮಾಡುತ್ತಿವೆ. ಅವುಗಳ ಆಡಳಿತವನ್ನು ನಿಯಂತ್ರಿಸಿಕೆವುದಕ್ಕೋಸ್ಕರ ಸರ್ಕಾರ ಕಾನೂನುಗಳನ್ನು ರಚನೆ ಮಾಡಿದೆ. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರುಗಳನ್ನು ನೇಮಕ ಮಾಡುವುದಕ್ಕೆ ಮತ್ತು ಅವರ ಸೇವಾ ನಿಯಮಗಳಿಗೆ ಪ್ರತ್ಯೇಕವಾದಂಥ ನಿಯಮಗಳು ಮತ್ತು ಕಾನೂನುಗಳು ಇವೆ. ಆಯಾ ಸಹಕಾರಿ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಅಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಸಂಬಳ ಕೊಡಲಾಗುತ್ತದೆ. ಸರ್ಕಾರದಿಂದ ಅವರಿಗೆ ಸಂಬಳ ಸಾರಿಗೆ ಕೊಡುವುದಿಲ್ಲವಾದ್ದರಿಂದ ಆ ನೌಕರರುಗಳನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.— ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳು ತಮ್ಮನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸಬೇಕೆಂದು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ

ಜಿಲ್ಲೆಗಳಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಇವರ ನ್ಯಾಯವಾದ ಬೇಡಿಕೆಯನ್ನು ಸರ್ಕಾರ ಪರಿಗಣಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.— ಕೆಲವು ಸಹಕಾರಿ ಸಂಘ ಸಂಸ್ಥೆಗಳು ನೌಕರರುಗಳು ತಮ್ಮನ್ನು ಸರ್ಕಾರಿ ನೌಕರರುಗಳಂತೆ ಪರಿಗಣಿಸಬೇಕೆಂದು ಕೇಳಿದ್ದಾರೆ. ಇವರ ಬಗ್ಗೆ ಸರ್ಕಾರ ಅನೇಕಸಾರಿ ಯಾವುದೇ ಸಹಕಾರ ಸಂಘ ಸಂಸ್ಥೆಗಳ ನೌಕರರುಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದಕ್ಕೆ ಇಷ್ಟಪಡುವುದಿಲ್ಲ, ಸ್ಪಷ್ಟವಾಗಿ ಹೇಳಿದೆ.

ಶ್ರೀ ಪುಟ್ಟಾಪತಿ.— ಮಾನ್ಯ ಅಧ್ಯಕ್ಷರೇ. ಸಹಕಾರಿ ಮತ್ತು ಸರ್ಕಾರಿ ಎಂಬುದರಲ್ಲಿ ಏನಂ ವ್ಯತ್ಯಾಸ ಇದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಸಹಕಾರಿ ತತ್ವಕ್ಕೆ ಮಾನ್ಯತೆ ಕೊಟ್ಟು, ಒಂದೇ ಕೆಲಸಕ್ಕೆ ಒಂದೇ ತರವಾದ ವೇತನವನ್ನು ಮತ್ತು ಸೌಲಭ್ಯವನ್ನು ಒದಗಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಜೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಸಹಕಾರಿ ಕ್ಷೇತ್ರದಲ್ಲಿ ದುಡಿಯುವ ನೌಕರರಿಗೆ ಯಾವ ಕಾನೂನು ಇದೆ, ಮತ್ತು ಸರ್ಕಾರಿ ಕ್ಷೇತ್ರದಲ್ಲಿ ದುಡಿಯುವ ನೌಕರರಿಗೆ ಯಾವ ಕಾನೂನು ಇದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂಬುದಾಗಿ ಭಾವಿಸಿ ಕೊಳ್ಳುತ್ತೇನೆ. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಆಯಾಯ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಸಂಬಳ ಸಾರಿಗೆಗಳನ್ನು ಕೊಡಲಾಗುತ್ತದೆ. ಸರ್ಕಾರದಲ್ಲಿ ಹಣ ಇದೆಯೆಂದು ಅವರಿಗೆ ಹೆಚ್ಚು ಸಂಬಳವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಮಾದೇಗೌಡ.— ಹಳ್ಳಿಗಾಡುಗಳಲ್ಲಿ ಇರುವ ಸಹಕಾರಿ ಸಂಘಗಳಲ್ಲಿ ಅಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳೇ ಹಣವನ್ನು ತಿಂದುಹಾಕಿರುವ ಉದಾಹರಣೆಗಳು ಇವೆ. ಆ ಸಹಕಾರಿ ಸಂಘಗಳಲ್ಲಿ ಈಗ ಏನೂ ಇಲ್ಲ. ಮೇಜುಕುರ್ಚಿಗಳನ್ನು ಮಾತ್ರ ಬಿಟ್ಟಿದ್ದಾರೆ. ಎಂದು ಕಾಣುತ್ತದೆ. ಹೀಗೆ ಎಲ್ಲವನ್ನೂ ತಿಂದು ಹಾಕಿ ಬಿಟ್ಟಿದ್ದಾರೆ. ಅಂತಹ ಪ್ರಕರಣಗಳಲ್ಲಿ ನಿಮ್ಮ ಸಹಕಾರ ಸಂಘಗಳಲ್ಲಿರುವವರು ಎಷ್ಟು ಹಣವನ್ನು ತಿಂದಿದ್ದಾರೆ ಅದರಲ್ಲಿ ಒಂದು ಕೇಸ್‌ನ್ನಾದರೂ ಹಿಡಿದು, ತಿಂದ ಹಣವನ್ನು ವಸೂಲು ಮಾಡಿದ್ದು ಉಂಟೇ ? ಅಥವಾ ಹಾಗೆ ಹಿಡಿದು ವಸೂಲು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೀರಾ ? ಹಾಗೆ ತಪ್ಪಿತಸ್ಥರು ಎಂದು ಕಂಡುಬಂದವರು ತಿಂದ ಹಣದ ವಸೂಲಿಗಾಗಿ ಅವರ ಮನೆಯನ್ನು ಜಪ್ತಿ ಮಾಡಿದ್ದೀರಾ ? ಅವರ ಮೇಲೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಂಡಿದ್ದೀರಾ? ಅಂತಹ ಹಣತಿಂದು ಬಿಟ್ಟವರು ಆ ಸಂಘವನ್ನು ಬಿಟ್ಟು ಬೇರೆ ಕಡೆಗಳಲ್ಲಿ ಹೋಗಿ ಕೆಲಸ ಮಾಡಿ ಸಂಪಾದನೆ ಮಾಡುತ್ತಾ ಇದ್ದಾರೆ. ಸ್ವಯಂ ಸೇವಾ ಸಂಸ್ಥೆಗಳಂ ಪ್ರಜಾಪ್ರಭುತ್ವಕ್ಕೆ ಬುನಾದಿ ಎಂದು ಹೇಳುತ್ತಾ ಇರುತ್ತೀರಿ. ಅಂತಹ ಸಂಸ್ಥೆಗಳನ್ನು ಸರಿಮಾಡುವುದಕ್ಕೆ ಮನಸ್ಸು ಮಾಡಿದ್ದೀರಾ ?

ಶ್ರೀ ಹೆಚ್. ಏಕಾಂತಯ್ಯ.— ಮಾನ್ಯ ಸದಸ್ಯರಂ ಹೇಳಿದ ಹಾಗೆ ಕೆಲವಾರಂ ಪ್ರಕರಣಗಳಲ್ಲಿ ಸಹಕಾರ ಸಂಘಗಳ ನೌಕರರೇ ಹಣದ ದುರುಪಯೋಗ ಮಾಡಿರುವುದು ನಿಜ. ಮಾನ್ಯ ಸದಸ್ಯರು ಹೇಳಿದ ಹಾಗೆ ಮೇಜು ಕುರ್ಚಿಗಳನ್ನು ಮಾತ್ರ ಬಿಟ್ಟಿದ್ದಾರೆ. ಬಹುಶಃ ಅವುಗಳನ್ನು ತಿನ್ನಲಿಕ್ಕೆ ಬಂದಿದ್ದರೆ ಅದನ್ನೂ ತಿಂದು ಹಾಕಿ ಬಿಡುತ್ತಿದ್ದರೋ ಏನೋ ? ಅವುಗಳನ್ನು ತಿನ್ನುವಂತಿಲ್ಲ. ಇಂತಹ ಸಹಕಾರ ಸಂಘಗಳಲ್ಲಿ ಅಧಿಕಾರಿಗಳು, ಅಧಿಕಾರೇತರರು ಯಾವುದೇ ರೀತಿಯ ದುರುಪಯೋಗವನ್ನು ಮಾಡಿದ್ದರೆ ಅಂತಹವರ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಂ ಅವಕಾಶ ಇದೆ. ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ ಇನ್ನಂ ಈ ವಿಚಾರವಾಗಿ ನಿರ್ದಿಷ್ಟ ಪ್ರಕರಣಗಳ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಗಳನ್ನು ಕೇಳಿದರೆ ವಿವರಗಳನ್ನು ಕೊಡುತ್ತೇನೆ. ಸಹಕಾರ ಸಂಘಗಳು ನೌಕರರು, ಅಧಿಕಾರೇತರರು ದುರುಪಯೋಗ ಮಾಡಿದ್ದಲ್ಲಿ, ಅವರ ಮೇಲೆ, ಕ್ರಿಮಿನಲ್ ಕೇಸ್, ಸಿವಿಲ್‌ಕೇಸ್, ಇತ್ಯಾದಿಗಳನ್ನು ಶಾಸನದನ್ವಯ ತೆಗೆದುಕೊಳ್ಳಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.— ಈಗ ಪ್ರಶ್ನೋತ್ತರ ಕಾಲ ಮುಗಿದಿದೆ. ಆದರೂ ಪ್ರಶ್ನೆ ಕೇಳಿದವರಿಗೆ ಮಾತ್ರ ತಮ್ಮ ಪ್ರಶ್ನೆಯೊಂದಿಗೆ ಒಂದು ಪೂರಕ ಪ್ರಶ್ನೆ ಕೇಳಲಂ ಅವಕಾಶವನ್ನು ಕೊಡುತ್ತೇನೆ. ಬೇರೆಯವರಿಗೆ ಅವಕಾಶವನ್ನು ಕೊಡಲು ಬರುವುದಿಲ್ಲ. ಈಗ ಶ್ರೀ ಆರ್ ಎನ್. ನಾಯಕ್‌ರವರು ತಮ್ಮ ಪ್ರಶ್ನೆಯನ್ನು ಕೇಳಬಹುದು.